

ಇಷ್ಟವಿಲ್ಲದ ಗಂಡನನ್ನು ಕಟ್ಟಿಕೊಂಡು ಜೀವಂತ ನರಕ ಕಾಣುವ ಬೇರೆ ಹೆಂಗಸರನ್ನು ಕಂಡಾಗ, ಇಂಥ ಮದುವೆ ಆಗುವುದರ ಬದಲು ಒಬ್ಬರೇ ಇರುವುದೇ ಲೇಸು ಎಂದು ಬಹಳಷ್ಟು ಮಹಿಳೆಯರಿಗೆ ಅನ್ನಿಸಿದೆ. ಅದರಲ್ಲಿ ತಪ್ಪೇನೂ ಇಲ್ಲ.

ಅಂತರ್ಜಾಲ, ಸಾಮಾಜಿಕ ತಾಣಗಳು ಸರ್ವಾಂತರ್ಯಾಮಿಯಾದ ಈ ಕಾಲಘಟ್ಟದಲ್ಲಿ ಭಾರತದ ಪುಟ್ಟ ಹಳ್ಳಿಯೊಂದರಲ್ಲಿ ಕುಳಿತ ತರುಣಿಯೂ ಇಡೀ ಜಗತ್ತಿನ ವಿಷಯ ತಿಳಿಯಬಹುದಾಗಿದೆ. ಹೀಗಾಗಿ ಪರಂಪರೆಯ ಹೆಸರಿನಲ್ಲಿ ಮೂಢನಂಬಿಕೆಗಳನ್ನು ಅವಳ ತಲೆಯಲ್ಲಿ ತುಂಬುವುದು ಅಸಾಧ್ಯವಾಗುತ್ತಿದೆ. ಹೆಣ್ಣು ಮುಖ್ಯವಾಗಿ ಪ್ರಶ್ನಿಸುವುದನ್ನು ಮತ್ತು ಉತ್ತರ ಕಂಡುಕೊಳ್ಳುವುದನ್ನು ಕಂಡುಕೊಂಡಿದ್ದಾಳೆ.

ಹೆಣ್ಣುಮಕ್ಕಳಷ್ಟೇ ಗಂಡುಮಕ್ಕಳನ್ನು ಬೆಳೆಸುವಾಗಲೂ ನಾವು ಮುತುವರ್ಜಿಯನ್ನು ತೆಗೆದುಕೊಳ್ಳಬೇಕಿದೆ. ಹೆಣ್ಣನ್ನು ಪ್ರೀತಿಸುವುದರ ಜೊತೆಗೆ ಆಕೆಯನ್ನು, ಆಕೆಯ ಆಯ್ಕೆಗಳನ್ನು ಗೌರವಿಸುವುದನ್ನೂ ನಮ್ಮ ಗಂಡುಮಕ್ಕಳಿಗೆ ಹೇಳಿಕೊಟ್ಟು ಬೆಳೆಸಬೇಕಿದೆ. ಮನೆಯ ನಿರ್ವಹಣೆ, ಮಕ್ಕಳ ನಿರ್ವಹಣೆಯೆಲ್ಲ ಹೆಂಗಸಿನ ಜವಾಬ್ದಾರಿ ಮಾತ್ರವಲ್ಲ ಎಂಬುದನ್ನು ಒತ್ತಿ ತಿಳಿಸಬೇಕಿದೆ. ನಮ್ಮಜ್ಜಿ ನಮ್ಮಜ್ಜನ ಜೊತೆಗೆ ಹೊಂದಿಕೊಂಡಂತೆಯೇ ನನ್ನ ಹೆಂಡತಿಯೂ ನನ್ನೊಡನೆ ಹೊಂದಿಕೊಳ್ಳಬೇಕು, ಅದೇ ಸಂಸ್ಕೃತಿ ರಕ್ಷಣೆ ಎಂದರೆ, ಹೊಸ ಕಾಲದ ಪಾಠಗಳನ್ನು ಕಲಿತ ಹೆಣ್ಣು ಯಾಕೆ ಸುಮ್ಮನಿರುತ್ತಾಳೆ? ಅಂಥ ಬಲವಂತದ ಹೊಂದಾಣಿಕೆಯ ಬದಲು ಒಬ್ಬಳೇ ಇರುವುದೇ ಲೇಸು ಎಂದು ತೀರ್ಮಾನಿಸುತ್ತಾಳೆ. ಹೊಸ ಕಾಲದ ಹೆಣ್ಣಿಗೆ ತಕ್ಕ ಹಾಗೆ ಹೊಸ ಕಾಲದ ಗಂಡೂ ಬದಲಾಗುವುದು ಈ ಕಾಲದ ಅಗತ್ಯವಾಗಿದೆ. ಪರಸ್ಪರ ಗೌರವಿಸುವ, ಆದರ ತೋರುವ ಸಂಗಾತಿಗಳ ನಿರೀಕ್ಷೆ ಗಂಡಿನಷ್ಟೇ ಹೆಣ್ಣಿಗೂ ಇರುತ್ತದೆ.

# ಯಜಮಾನಿಕೆ ವ್ಯವಸ್ಥೆಯ ಹಿಡಿತ ಬಿಗಿಯಾಗುತ್ತಿದೆ

ಆಧುನಿಕ ಮಹಿಳೆಯರನ್ನು ಯಾವುದಾದರೂ ಕಾರಣಕ್ಕೆ ದೂಷಿಸುವಾಗ, ಮಹಿಳೆಯರ ಸಾಂಪ್ರದಾಯಿಕ ಶೈಲಿಯ ಬದುಕಿನತ್ತ ನೋಟ ಹೊರಳುತ್ತದೆ. ತೀರಾ ಬೇಗನೆ ತಾಳಿಗೆ ಕೊರಳೊಡ್ಡುವುದು, ಹೆರುವುದು, ಹೊರುವುದು, ಬೇಯಿಸುವುದು, ಬಸಿಯುವುದು, ಕುಟ್ಟುವುದು, ಕಡೆಯುವುದು, ಗಂಡಸಿನ ಮುಂದೆ ಕೈ ಒಡ್ಡುವುದು ಇದೇ ಅಲ್ಲವೆ? ತುಂಬಾ ಬಾರಿ ಇದರ ಹೊರತಾದ ಆಯ್ಕೆಗಳು ಸ್ತ್ರೀಯರ ಅರಿವಿಗೆ ಬರದೆ ಬದುಕು ಕಳೆದು ಹೋಗುತ್ತದೆ. ಸ್ವಾತಂತ್ರ್ಯದ ಅರಿವಿಲ್ಲದೆ ಅವರು ಬದುಕಿಬಿಟ್ಟರು ಎಂದರೆ, ಕಿಟಕಿ ಪರದೆ ಸರಿಸದೆ ಯಜಮಾನಿಕೆ ವ್ಯವಸ್ಥೆ ಅವರನ್ನು ಕತ್ತಲೆಯಲ್ಲಿಟ್ಟಿದೆ, ಅವರ ಹಕ್ಕುಗಳನ್ನು ಮತ್ತವರ ಆಯ್ಕೆಗಳನ್ನು ಕಿತ್ತುಕೊಂಡಿದೆ, ಹತ್ತಿಕ್ಕಿದೆ, ತಾನೇ ನಿರ್ಧರಿಸಿದೆ ಎಂದರ್ಥ.



ಚೈತ್ರಿಕಾ ನಾಯ್ಕ ಹರ್ಗಿ
ಕಂಟೆಂಟ್ ರೈಟರ್

ಆಧುನಿಕ ಮಹಿಳೆಯರ ಬದುಕು ಮತ್ತು ಸಮಸ್ಯೆಗಳು ಇದಕ್ಕಿಂತ ಹೆಚ್ಚೇನು ಭಿನ್ನವಾಗಿಲ್ಲ. ಹಕ್ಕುಗಳ ಬಗ್ಗೆ ಅರಿವಿರುವುದರ ಜೊತೆ ಕರ್ತವ್ಯಗಳು ಅವರ ಬೆನ್ನಿಗಂಟಿಕೊಂಡಿವೆ. ವಾಷಿಂಗ್, ಕುಕಿಂಗ್, ಕ್ಲೀನಿಂಗ್, ಮಾಪಿಂಗ್, ಆಫೀಸು, ಹೊರಗಿನ ವ್ಯವಹಾರಗಳು, ಲೈಂಗಿಕ ಕಿರುಕುಳಗಳು, ಮಾನಸಿಕ ಒತ್ತಡಗಳು, ಒತ್ತಡ ಜೀವನಶೈಲಿ ಸೃಷ್ಟಿಸಿದ ಆರೋಗ್ಯ ಸಮಸ್ಯೆಗಳು, ಕಡಿಮೆ ವೇತನ, ಕಡಿಮೆ ಗೌರವ, ಮಾಡರ್ನ್ ವುಮನ್ನು ಎನ್ನುವ ಕುಹಕ, ಬಿದ್ದರೂ ಎದ್ದರೂ ಎಲ್ಲವನ್ನೂ ತನ್ನ ಹೆಗಲ ಹೆಗಲ ಮೇಲೆ ಹೊರಬೇಕಾದ ಪರಿಸ್ಥಿತಿ ಒಂದೇ ಎರಡೇ?

ಈ ನಡುವೆ ಸಂಗಾತಿ ಆಯ್ಕೆ, ಲೈಂಗಿಕ ಸ್ವಾತಂತ್ರ್ಯ, ಮದುವೆ, ಹೆರಬೇಕೋ ಬೇಡವೋ ಎಂಬ ನಿರ್ಧಾರಗಳನ್ನು ಅವಳು ತೆಗೆದುಕೊಂಡರೆ, ಕಾನೂನುದತ್ತವಾಗಿ ಅವಳಿಗೆ ಬಂದಿರುವ ಸ್ವಾತಂತ್ರ್ಯವನ್ನು ಅವಳು ಅನುಭವಿಸಿದರೆ ಯಜಮಾನಿಕೆ ವ್ಯವಸ್ಥೆ ಕೆಂಗಣ್ಣಾಗುತ್ತದೆ ಎಂಬುದು ವಿಪರ್ಯಾಸ. ಹೆಣ್ಣಿನ ಮೂಲಭೂತ ಸ್ವಾತಂತ್ರ್ಯವನ್ನು ನಿಯಂತ್ರಿಸಬೇಕು, ಹಕ್ಕುಗಳನ್ನು ಕಿತ್ತುಕೊಳ್ಳಬೇಕು ಎಂಬ ಮನಸ್ಥಿತಿ ಮತ್ತು ಈ ಕಾರಣಕ್ಕೆ ದೋಷಾರೋಪಣೆ ಮಾಡುವುದು ಸ್ತ್ರೀ ಸ್ವಾತಂತ್ರ್ಯಹರಣ ಮಾಡುವ ಅಸ್ವಸ್ಥ ಮನಸ್ಥಿತಿ.

ಹೆಚ್ಚುತ್ತಿರುವ ಅತ್ಯಾಚಾರ, ಸ್ತ್ರೀ ಸುರಕ್ಷತೆ, ಸ್ತ್ರೀ ಅಪೌಷ್ಟಿಕತೆ, ಆರೋಗ್ಯ ಸಮಸ್ಯೆಗಳು, ಲೈಂಗಿಕ ಕಿರುಕುಳ, ಸಮಾನ ವೇತನ ಸಮಾನ ಗೌರವ ಬಗ್ಗೆ ಚರ್ಚೆಯಾಗಬೇಕಾದ ಸಮಯವಿದು. ಕೊರೊನಾದಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪೆಟ್ಟು ಬಿದ್ದಿದೆ, ಬಾಲ್ಯವಿವಾಹ ಹೆಚ್ಚುತ್ತಿವೆ, ಸ್ತ್ರೀಯರಿಗೆ ಉದ್ಯೋಗ ನಷ್ಟವಾಗುತ್ತಿದೆ. ಈ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳು ಮತ್ತು ಜವಾಬ್ದಾರಿಯುತ ನಾಗರಿಕರಾಗಿ ನಾವು ಚರ್ಚಿಸಬೇಕಾದ ಪರಿಹಾರಕ್ರಮ ಕಂಡುಕೊಳ್ಳಬೇಕಾದ ಸಂದರ್ಭ ಇರುವಾಗ, ಸಮಾಜ ಆಧುನಿಕ ಮಹಿಳೆಯರನ್ನು ದೂಷಿಸುತ್ತಾ ಕೂರುತ್ತದೆ ಎಂದರೆ ಯಜಮಾನಿಕೆ ವ್ಯವಸ್ಥೆಯ ಹಿಡಿತ ಬಿಗಿಯಾಗುತ್ತಿದೆ ಎಂದರ್ಥ. ಮತ್ತಿದು ಪ್ರತಿಗಾಮಿ ಬೆಳವಣಿಗೆ ಕೂಡ.